ಸಾಕ್ಷಿಯನ್ನು ದಿನಾಂಕ 25-03-2023 ರಂದು ಕರೆಸಿ ಪ್ರಮಾಣೀಕರಿಸಲಾಯ್ತು.

**ಮುಖ್ಯ ವಿಚಾರಣೆಃ 2 ನೇ ಎದುರುದಾರರ ಪರ ವಕೀಲರಿಂದ :**

ನನ್ನ ಮುಖ್ಯ ವಿಚಾರಣೆಗಾಗಿ ಪ್ರಮಾಣ ಪತ್ರ ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಸಂಗತಿಗಳು ಸತ್ಯವಾಗಿರುತ್ತವೆ.

ನೋಟೀಸಿನ ಪ್ರತಿಯನ್ನು ನಿ.ಆರ್-1 ಎಂದು, ಮನವಿ ಪತ್ರದ ಪ್ರತಿಯನ್ನು ನಿ.ಆರ್-2 ಎಂದು, ಮಹಜರ್ ನ ಪ್ರತಿಯನ್ನು ನಿ.ಆರ್-3 ಎಂದು, ಪರಿಹಾರದ ಬಗ್ಗೆ ಬಿಲ್ಲಿನ ಪ್ರತಿಯನ್ನು ನಿ.ಆರ್-4 ಎಂದು, ಜಿಲ್ಲಾಧಿಕಾರಿಗಳ ಆದೇಶದ ಪ್ರತಿಯನ್ನು ನಿ.ಆರ್-5 ಎಂದು, ಎಂ.ಬಿ. ಬುಕ್ಕಿನ ಪ್ರತಿಯನ್ನು ನಿ.ಆರ್-6 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಅರ್ಜಿದಾರರ ಪರ ವಕೀಲರಿಂದಃ**

ನಾನು ನನ್ನ ಪ್ರಮಾಣ ಪತ್ರದ ಪ್ಯಾರಾ 3 ಮತ್ತು 5 ರಲ್ಲಿ ಹೇಳಿರುವ ಅಂಶಗಳು ಸುಳ್ಳಿನಿಂದ ಕೂಡಿವೆ ಎಂದರೆ ಸರಿಯಲ್ಲ. ನಾವು ಪರಿಹಾರ ಕೊಡಲು ಬಾಧ್ಯಸ್ಥರು ಎಂದರೆ ಸರಿಯಲ್ಲ. ಜಿಲ್ಲಾಧಿಕಾರಿಗಳ ಆದೇಶದ ಪ್ರಕಾರ ನಾವು ಪರಿಹಾರವನ್ನು ನೀಡಿಲ್ಲ ಎಂದರೆ ಸರಿಯಲ್ಲ. ನಾವು ಜಮೀನಿನಲ್ಲಿ ಲೈನನ್ನು ಎಳೆದಿರುವುದು ಜಮೀನನ್ನು ಸ್ವಾಧೀನಪಡಿಸಿಕೊಂಡಿರುವುದಕ್ಕಿಂತಲೂ ಹೆಚ್ಚಿನ ರೀತಿಯಲ್ಲಿ ಭೂ ಮಾಲೀಕನಿಗೆ ತೊಂದರೆ ಆಗಿದೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ನಾವು ಕಡಿಮೆ ಪರಿಹಾರ ನೀಡಿದ್ದೇವೆ ಎಂದರೆ ಸರಿಯಲ್ಲ. ಲೈನನ್ನು ಎಳೆಯುವ ಸಮಯದಲ್ಲಿ ಇದ್ದ ಬೆಳೆಗೆ ನಾವು ಪರಿಹಾರವನ್ನು ನೀಡಿದ್ದೇವೆ. ಒಂದು ಹಲಸಿನ ಮರ ಇದ್ದು ಅದಕ್ಕೆ ಪರಿಹಾರವನ್ನು ನೀಡಿದ್ದೇವೆ. ಹಲಸಿನ ಮರ ಅಲ್ಲದೇ 14 ಹುಣಸೇ ಮರಗಳು, ಒಂದು ಮಾವಿನ ಮರ, 2 ಬೇವಿನ ಮರಗಳು ನಾವು ಕಡಿದು ಹಾಕಿದ್ದೇವೆ ಎಂದರೆ ಸರಿಯಲ್ಲ. ಆ ಸಮಯದಲ್ಲಿದ್ದ 2 ಎಕರೆ ಶೇಂಗಾ ಮತ್ತು

ತೊಗರಿ ಹಾಳಾಗಿದೆ ಎಂದರೆ ಸರಿಯಲ್ಲ. ನಾವು ಕಡಿಮೆ ಜಮೀನಿಗೆ ಪರಿಹಾರ ನೀಡಿದ್ದೇವೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸಾ ಸ ಇ ಎ ಒ

1 ನೇ ಅಧಿಕ ಜಿಲ್ಲಾ ನ್ಯಾಯಾಧೀಶರು,
ತುಮಕೂರು.